ಓ.ಎಸ್. ನಂಃ 394/2022
ಪಿ.ಡಬ್ಲ್ಯೂ-3 (ನಿಂಗವ್ವ)

ದಿನಾಂಕ: 21-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಎಲ್.ಎಸ್.ಬಿ. ವಾದಿ ಪರ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

**<u>ಪಾಟೀಸವಾಲುಃ ಶ್ರೀ.ಎಮ್.ಆರ್.ಬಿ. 1 ಮತ್ತು 2ನೇ ಪ್ರತಿವಾದಿ ಪರ ವಕೀಲರಿಂದಃ</u>**

ವಾದಿ ನನ್ನ ಮಗಳು. ವಾದಿಯನ್ನು ಹೊರತುಪಡಿಸಿ ನನಗೆ ಇನ್ನು 4 ಜನ ಮಕ್ಕಳು ಇರುತ್ತಾರೆ. ದಾವಾ ಆಸ್ತಿಯ ಪಹಣಿ ಪತ್ರಿಕೆ ನಿಪಿ-2 ರಲ್ಲಿ ನನ್ನ ಹಾಗೂ ಪ್ರತಿವಾದಿ 1 ಮತ್ತು 2 ರವರ ಹೆಸರು ಜಂಟಿಯಾಗಿ ಇದೆ ಎಂದಿರೆ ಸರಿ. ಸದರಿ ಪಹಣಿ ಪತ್ರಿಕೆಯಲ್ಲಿ ಸದರಿ ಜಮೀನು ಬಾಗಾಯತ ಜಮೀನು ಹಾಗೂ ಅದರಲ್ಲಿ ಕಬ್ಬು ಬೆಳೆಯುತ್ತೇವೆ ಎಂದು ಬರೆಯಲಾಗಿದೆ ಎಂದರೆ ಸರಿ.

2. ನನ್ನ, ಪ್ರತಿವಾದಿ 1 ಮತ್ತು 2 ರವರ ನಡುವೆ ನೋಂದಾಯಿತ ವಾಟ್ನಿ ಪತ್ರ ಅಥವಾ ನ್ಯಾಯಾಲಯದ ಡಿಕ್ರೀಯ ಪ್ರಕಾರ ವಾಟ್ನಿ ಆಗಿಲ್ಲ ಎಂದರೆ ಸರಿ, ಆದರೆ ಹಿರಿಯರಲ್ಲಿ ಆಗಿದೆ. ದಾವಾ ಆಸ್ತಿಯ ಪೈಕಿ 01ಎ-24ಗು ಜಮೀನು ನನ್ನ ಪಾಲಿಗೆ ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ ಎಂದರೆ ಸರಿ. ನನ್ನ, ಪ್ರತಿವಾದಿ 1 ಮತ್ತು 2 ರವರ ಹೆಸರು ದಾವಾ ಆಸ್ತಿಯ

ಓ.ಎಸ್. ನಂಃ 394/2022
ಪಿ.ಡಬ್ಲ್ಯೂ-3 (ನಿಂಗವ್ವ)

ಉತಾರದಲ್ಲಿ ಜಂಟಿಯಾಗಿರುವ ಬಗ್ಗೆ ವಾದಿಗೆ ಗೊತ್ತಿದೆ ಎಂದರೆ ಸರಿ. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ.26/1 ರಲ್ಲಿ ನನ್ನ ಪಾಲಿಗೆ 01ಎ-24ಗು, 1 ಮತ್ತು 2ನೇ ಪ್ರತಿವಾದಿಯರ ಪಾಲಿಗೆ ಒಟ್ಟಾಗಿ 01ಎ-24ಗು ಇನ್ನು ನಮೂದು ಆಗಿಲ್ಲ ಎಂದರೆ ಸರಿ. ಅದೇ ರೀತಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತೋರಿಸಿರುವ ನನ್ನ ಪಾಲಿಗೆ 01ಎ-24ಗು ಜಮೀನಿಗೆ ಪೂರ್ವಕ್ಕೆ- ನನ್ನ (ನಿಂಗವ್ವ ಭೀಮಪ್ಪ ನಾಯ್ಕ), ಪಶ್ಚಿಮಕ್ಕೆ- ವೆಂಕಪ್ಪ ಸಿದ್ದಪ್ಪ ಅಡವಿ ಇವರ ಜಮೀನು, ದಕ್ಷಿಣಕ್ಕೆ - ರಸ್ತೆ, ಉತ್ತರಕ್ಕೆ- ರಾಮಪ್ಪ ಅಡವಯ್ಯಾ ಮಠದ ಇವರ ಜಮೀನು ಹಾಗೂ 1 ಮತ್ತು 2ನೇ ಪ್ರತಿವಾದಿಯರ ಭಾಗಕ್ಕೆ ಬಂದ 01ಎ-24ಗು ಜಮೀನಿಗೆ ಪೂರ್ವಕ್ಕೆ- ರಾಮಪ್ಪ ದುಂಡಪ್ಪ ಕೊಪ್ಪದ ಇವರ ಜಮೀನು, ಪಶ್ಚಿಮಕ್ಕೆ- ಪ್ರತಿವಾದಿಯರ ಜಮೀನು, ದಕ್ಷಿಣಕ್ಕೆ - ರಸ್ತೆ, ಉತ್ತರಕ್ಕೆ- ರಾಮಪ್ಪ ಅಡವಯ್ಯಾ ಮಠದ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ.

3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತೋರಿಸಿದ ಚಕ್ಕಬಂದಿಯ ನಡುವಿನ ಆಸ್ತಿಯಲ್ಲಿ ನಾನು, ಪ್ರತಿವಾದಿ 1 ಮತ್ತು 2 ಪಾಲು ಮಾಡಿಕೊಂಡಿದ್ದೇವೆ ಎಂದು ಹೇಳಿ ತಲಾಟಿಯವರಿಗೆ ವರದಿ ಕೊಟ್ಟಿಲ್ಲ ಎಂದರೆ ಸರಿ. ಅದೇ ರೀತಿ ನಮ್ಮ ನಡುವೆ ಪಾಲು ಆಗಿದೆ ಎಂದು ಯಾವುದೇ ಡೈರಿ ಆಗಿಲ್ಲ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿ 1 ಮತ್ತು 2 ರವರ ನಡುವೆ ಹಿರಿಯರ ಸಮಕ್ಷಮ ವಾಟ್ನಿ ಪತ್ರ ಆಗಿಲ್ಲ.

4. ಭೀಮಪ್ಪ ಹುಚ್ಚಪ್ಪ ನಾಯ್ಕ ನನಗೆ ನನ್ನ ತಂಗಿಯ ಗಂಡ ಆಗುತ್ತಾರೆ. ಖರೀದಿ ಕರಾರ ಪತ್ರ ನನ್ನ ಮಗಳಾದ ವಾದಿಯ ಹೆಸರಿಗೆ ಯಾವ ದಿನಾಂಕದಂದು ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಖರೀದಿ ಕರಾರ ಪತ್ರಕ್ಕೆ ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಖರೀದಿ ವ್ಯವಹಾರವು ಐದು ಲಕ್ಷ ಚಿಲ್ಲರೆ ಮೊತ್ತಕ್ಕೆ ಆಗಿದೆ ಆದರೆ ನನಗೆ ಸರಿಯಾದ ಖರೀದಿ ಮೊತ್ತ ಹೇಳಲು ಬರುವುದಿಲ್ಲ. ಖರೀದಿ ಕರಾರ ಪತ್ರಕ್ಕೆ ನಾನು ಸಾಕ್ಷಿದಾರಳಾಗಿ ಸಹಿ ಮಾಡಿಲ್ಲ ಎಂದರೆ ಸರಿ.

5. ಭೀಮಪ್ಪ ಹುಚ್ಚಪ್ಪ ನಾಯ್ಕ ತೀರಿಕೊಂಡು ಅಂದಾಜು 5-6 ವರ್ಷ ಆಗಿದೆ. ಸದರಿಯವರ ಮರಣಾ ನಂತರ ಪ್ರತಿವಾದಿಯರು ವಾರಸಾ ಆಗಿರುತ್ತಾರೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಯರ ನಡುವೆ 40 ವರ್ಷದ ಹಿಂದೆ ಪಾಲು ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭೀಮಪ್ಪ ಹುಚ್ಚಪ್ಪ ನಾಯ್ಕ ದಾವಾ ಆಸ್ತಿಯನ್ನು ನನ್ನ ಮಗಳಾದ ವಾದಿಗೆ ಮಾರಾಟ ಮಾಡಲು ಒಪ್ಪಿ  ಖರೀದಿ ಕರಾರ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 3ನೇ ಪುಟದಲ್ಲಿ ಹೇಳಿರುವ ಪ್ರಕಾರ ನನ್ನ ಮತ್ತು ಪ್ರತಿವಾದಿಯರ ನಡುವೆ ವಾಟ್ನಿ ಆಗಿಲ್ಲ ಎಂದರೆ ಸರಿಯಲ್ಲ.

6. ಭೀಮಪ್ಪ ಹುಚ್ಚಪ್ಪ ನಾಯ್ಕ ಇವರು ಯಾರ ಬಳಿ ಸಾಲ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ.  ಪ್ರತಿವಾದಿಯರಿಗೆ ಯಾವುದೇ ದುಡ್ಡು ಕೊಡದೆ  ವಾದಿ

ಓ.ಎಸ್. ನಂಃ 394/2022
ಪಿ.ಡಬ್ಲ್ಯೂ-3 (ನಿಂಗವ್ವ)

ಒಂದು ಸುಳ್ಳು ಖರೀದಿ ಕರಾರ ಪತ್ರವನ್ನು ಬರೆಯಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ಆದ ಖರೀದಿ ಕರಾರ ಪತ್ರ ಸುಳ್ಳು ಇದೆ ಎಂದು ಗೊತ್ತಿದ್ದರೂ ಸಹ ವಾದಿ ನನ್ನ ಮಗಳಾಗಿದ್ದರಿಂದ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ